ಎ-72 (43)

**ಮಾನ್ಯ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಡಾ|| ಮರಿತಿಬ್ಬೇಗೌಡ ರವರು ನಿಯಮ 72ರಡಿಯಲ್ಲಿ ಸಲ್ಲಿಸಿರುವ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಹೇಳಿಕೆ**

**ಸೂಚನೆ: -**

ಮೈಸೂರು ಜಿಲ್ಲೆ. ಮೈಸೂರು ತಾಲ್ಲೂಕಿನ ಜಯಪುರ ಹೋಬಳಿ. ದಡದಹಳ್ಳಿ ಗ್ರಾಮದಲ್ಲಿನ ಸರ್ವೆ ನಂ. 184ರಲ್ಲಿರುವ 4.12 ಎಕರೆ ವಿಸ್ತೀರ್ಣದ ಜಮೀನಿನ ಪೈಕಿ 4.00 ಎಕರೆ ಜಮೀನು ಆರ್.ಟಿ.ಸಿ ಕಲಂ 9ರಲ್ಲಿ ಸರ್ಕಾರಿ ಹಳ್ಳ ಕೊರಕಲು ಎಂದು ಖಾತೆ ದಾಖಲಾಗಿದ್ದು. ಹಾಗೂ ಜೆ- ನಮೂನೆಯಲ್ಲಿನ ಹಕ್ಕು ಬದಲಾವಣೆಗಳ ವಿವರ ಹಾಗೂ ದಾಸ್ತಾವೇಜುಗಳು ಪರಸ್ಪರ ತಾಳೆ ಇರದ ಕಾರಣದಿಂದ ಖಾತೆ ಅಂಗೀಕರಿಸಲು ಬರುವುದಿಲ್ಲವೆಂದು ಅಲ್ಲಿನ ರಾಜಸ್ವ ನಿರೀಕ್ಷಕರು ಖಾತೆ ವಲೆ ಇಟ್ಟಿರುವುದನ್ನು ದಿನಾಂಕ:04.09.2019ರಂದು ಮೈಸೂರಿನ ಉಪವಿಭಾಗಾಧಿಕಾರಿಗಳು ಕಾನೂನು ಬಾಹಿರವಾಗಿ ಸದರಿ ಜಮೀನನ್ನು ವ್ಯಕ್ತಿಯೊಬ್ಬರಿಗೆ ಹಂಚಿಕೆ ಮಾಡಿರುತ್ತಾರೆ. ಈ ಸಂಬಂಧ ಅಕ್ರಮವೆಸಗಿದ ಅಧಿಕಾರಿಯ ವಿರುದ್ಧ ನಿಯಮಾನುಸಾರ ಕಾನೂನು ಕ್ರಮ ಕೈಗೊಳ್ಳದೆ ಇರುವುದರಿಂದ ಉಂಟಾದ ಸಮಸ್ಯೆ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಹೇಳಿಕೆ:-**

ಪ್ರಕರಣಕ್ಕೆ ಸಂಬಂಧಿಸಿದಂತೆ ಉಪವಿಭಾಗಾಧಿಕಾರಿಗಳು, ಮೈಸೂರು ಉಪವಿಭಾಗ ರವರ ನ್ಯಾಯಾಲಯದಲ್ಲಿ ಪ್ರಕರಣ ಸಂಖ್ಯೆ: ಆರ್.ಎ 426/2019 ರಂತೆ ವಿವಿಧ ದಿನಾಂಕಗಳಂದು ವಿಚಾರಣೆ ನಡೆದು ದಿನಾಂಕ:21/12/2016 ರಂದು ಆದೇಶ ಹೊರಡಿಸಿದ್ದು. ಸದರಿ ಆದೇಶವನ್ನು ಅನುಪಾಲನೆ ಮಾಡದೇ ರಾಜಸ್ವ ನಿರೀಕ್ಷಕರು ವಿನಾ ಕಾರಣ ದಾಖಲೆಗಳು ಪರಸ್ಪರ ತಾಳೆ ಇರುವುದಿಲ್ಲವೆಂದು ಖಾತೆ ಅರ್ಜಿಯನ್ನು ತಿರಸ್ಕರಿಸುವುದು ಕಾನೂನಿನ ಕ್ರಮವಲ್ಲ ಎಂದು ಗಮನಿಸಲಾಗಿರುತ್ತದೆ ಹಾಗೂ ಕರ್ತವ್ಯ ಲೋಪವೆಸಗಿರುವ ಸಂಬಂಧಪಟ್ಟ ನೌಕರರ/ಅಧಿಕಾರಿಗಳ ವಿರುದ್ಧ ಕೈಗೊಂಡಿರುವ ಕ್ರಮದ ಬಗ್ಗೆ ತಹಶೀಲ್ದಾರರಿಂದ ವರದಿಯನ್ನು ಪಡೆಯಲಾಗಿದ್ದು ಮೈಸೂರು ತಾಲ್ಲೂಕು. ಜಯಪುರ ಹೋಬಳಿ. ದಡದಹಳ್ಳಿ ಗ್ರಾಮದ ಸ.ನಂ 184 ರಲ್ಲಿ 4-12 ಎಕರೆ ವಿಸ್ತೀರ್ಣದ ಪೈಕಿ 4-00 ಎಕರೆ ವಿಸ್ತೀರ್ಣದ ಜಮೀನು ಮೇಲ್ಮನವಿದಾರರ ತಂದೆ ಕರಿಯ @ ನಂಜ ಬಿನ್ ನಂಜ ರವರಿಗೆ ಜೆ.ಡಿ ನಂ 18/1936-37 ರಂತೆ ದರಖಾಸ್ತು ಮೂಲಕ ದಿನಾಂಕ:09-11-1937ರಲ್ಲಿ ನಡೆಸಿದ ಬಹಿರಂಗ ಹರಾಜಿನ ಮುಖಾಂತರ ಬಂದಿರುವುದಾಗಿದ್ದು ನ್ಯಾಯಾಲಯದ ದಿನಾಂಕ:21/12/2021ರ ಆದೇಶದಂತೆ ಕ್ರಮಬದ್ಧವಾಗಿ ಎಂ.ಆರ್.ಹೆಚ್ 14/2019-20 ರಂತೆ ಕರಿಯ @ ನಂಜ ಬಿನ್ ನಂಜ ರವರ ಹೆಸರಿಗೆ ಆರ್.ಟಿ.ಸಿ ದಾಖಲಾಗಿರುತ್ತದೆ. ಆದ್ದರಿಂದ ಸಂಬಂಧಪಟ್ಟ ನೌಕರರ ವಿರುದ್ಧ ಕ್ರಮವಹಿಸುವ ಅವಶ್ಯಕತೆ ಇರುವುದಿಲ್ಲವೆಂದು ಉಪವಿಭಾಗಾಧಿಕಾರಿಗಳು. ಮೈಸೂರು ಉಪವಿಭಾಗ ಇವರು ವರದಿಯನ್ನು ಸಲ್ಲಿಸಿರುತ್ತಾರೆ.

ಆದರೆ. ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ. ಮೇಲ್ನೋಟಕ್ಕೆ ದಾಖಲಾತಿಯಲ್ಲಿ ತಿದ್ದುಪಡಿಗಳು ಆಗಿರುವುದು ಕಂಡುಬಂದಿದ್ದು. ಈ ಸಂಬಂಧ ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಕಲಂ 136(3)ರಡಿ ಉಪವಿಭಾಗಾಧಿಕಾರಿಗಳ ಆದೇಶದ ವಿರುದ್ಧ ಸಕ್ಷಮ ಪ್ರಾಧಿಕಾರವಾದ ಜಿಲ್ಲಾಧಿಕಾರಿಗಳು ತಮ್ಮ ನ್ಯಾಯಾಲಯದಲ್ಲಿ ಸ್ವಯಂ ಪ್ರೇರಿತವಾಗಿ ಪ್ರಕರಣವನ್ನು ದಾಖಲು ಮಾಡಿಕೊಂಡು ವಿಚಾರಣೆ ನಡೆಸಲು ನಿಯಮಾನುಸಾರ ಕ್ರಮವಹಿಸಲಾಗುತ್ತಿದೆ.

**ಇ-ಕಂಇ 353 ಬಿಎಂಎಂ 2021**

(ಆರ್.ಅಶೋಕ)